ಜನಿಸುವುದಕ್ಕಿಂತಲೂ, ಓರ್ವ ಚಕ್ರವರ್ತಿಯಾಗಿ ಜನಿಸುವುದಕ್ಕಿಂತಲೂ ಒಂದು 'ನೊಣ'ವಾಗಿ ಜನಿಸುವುದು ಮೇಲಲ್ಲವೇ ಎಂದು ಅವನು ಆಸೆ ಪಟ್ಟ.

ಕಾಸಿದ ತಲೆಎಣ್ಣೆಯ ಹಾಗೂ ಸೋಪಿನ ಸುಗಂಧ ಪಸರಿಸಿದ ಆ ಸ್ನಾನದ ಕೋಣೆಯ ಗೋಡೆಯ ಮೇಲೆ ಅಂಟಿಕೊಂಡು ವಸಂತಳನ್ನು ನೋಡಬಹುದಲ್ಲವೇ?...

ಓ... ದೇವರೇ ನನ್ನನ್ನು 'ನೊಣ'ವನ್ನಾಗಿಸು.

ದೇವಿ ಭಗವತಿ, ಶ್ರೀ ಅಯ್ಯಪ್ಪ, ಗುರುವಾಯೂರಪ್ಪ, ನನ್ನ ಪ್ರಾರ್ಥನೆಗೆ ಕಿವಿಗೊಡು. ನನ್ನನ್ನು 'ನೊಣ'ವನ್ನಾಗಿಸು. ಈ ಜೀವನ ಪರ್ಯಂತ ನನಗಿನ್ನೇನೂ ಬೇಡ. ಇನ್ಯಾವುದಕ್ಕೂ ಇನ್ಯಾವಾಗಲೂ ನಾನು ಆಸೆ ಪಡುವುದಿಲ್ಲ.

ನನ್ನನ್ನು 'ನೊಣ'ವಾಗಿಸು.

ನನ್ನನ್ನು 'ನೊಣ'ವಾಗಿಸು.

ಆಗುವುದಿಲ್ಲವೇ?

ಪರಮಕಾರುಣ್ಯನಾದ ದೇವರೆ, ದೇವರನ್ನು ಸೃಷ್ಟಿಸಿರುವುದು ಮನುಷ್ಯರ ಬೇಡಿಕೆಗಳನ್ನು ಈಡೇರಿಸಿ ಕೊಡುವುದಕ್ಕಾಗಿಯೇ ಅಲ್ಲವೇ? ಕುದುರೆಗಾಡಿಯನ್ನು ಓಡಿಸುತಿದ್ದ ಮಾಧವನಿಗೆ ಲಾಟರಿ ಹೊಡೆಸಿ ಕೊಡುವುದಕ್ಕೂ, ಹಲ್ಲುಬ್ಬ ಭಾಸ್ಕರನಿಗೆ ಸುಂದರಿಯಾದ ಹೆಂಡತಿಯನ್ನು ದೊರಕಿಸಿ ಕೊಡುವುದಕ್ಕೂ, ಗೋಪಾಲಮಾಸ್ತರಿಗೆ ಗಂಡು ಮಗು ಆಗುವಂತೆ ನೋಡಿಕೊಳ್ಳುವುದಕ್ಕೂ ಇರುವುದಲ್ಲವೆ ಈ ದೇವರು.

ದೇವರು ದೇವರನ್ನು ಸೃಷ್ಟಿಸಿರುವುದು ಪುರುಷೋತ್ತಮನ ಆಸೆಯನ್ನು ನೆರವೇರಿಸುವುದಕ್ಕಲ್ಲವೇ? ಹೌದು, ಅದಕ್ಕಾಗಿಯೇ ಇರುವುದು. ಅದಕ್ಕೂ ದೇವರಿಗೆ ಸಾಮರ್ಥ್ಯವಿಲ್ಲದಿದ್ದರೆ ಮತ್ತೇಕೆ ದೇವರನ್ನು ಸೃಷ್ಟಿಸಬೇಕಾಗುತ್ತದೆ. ಮತ್ತೊಮ್ಮೆ ಪುನರ್‌ಸೃಷ್ಟಿ ನಡೆಸಬೇಕಾಗುತ್ತದೆ. ಪುರುಷೋತ್ತಮನ ಆಸೆ ಅಥವಾ ಕೋರಿಕೆಯನ್ನು ನೆರವೇರಿಸಲು ಸಾಮರ್ಥ್ಯವಿರುವ ಮತ್ತೊಂದು ದೇವರನ್ನು, ಈ ಮೊದಲಿಗಿಂತಲೂ ಅಧಿಕ ಶಕ್ತಿಶಾಲಿಯಾದ ದೇವರನ್ನು!

ಪುರುಷೋತ್ತಮನ ಪ್ರಾರ್ಥನೆ ಮುಗಿಲು ಮುಟ್ಟಿತು. ಹಗಲೂ ರಾತ್ರಿ ಎನ್ನದೆ ಪ್ರಾರ್ಥಿಸಿದ. ನನ್ನನ್ನು 'ನೊಣ'ವಾಗಿಸಿ. ನನ್ನನ್ನು 'ನೊಣ'ವಾಗಿಸಿ ಎನ್ನುವುದೊಂದೇ ಪ್ರಾರ್ಥನೆ...

ಮರಗಿಡಗಳಿಗೆ ಆತ ಕೇಳಿಕೊಂಡ.

ಮರಗಳೇ ಗಿಡಗಳೇ ನನ್ನನ್ನು 'ನೊಣ'ವಾಗಿಸಿ.

ಕಾಗೆಗಳಲ್ಲೂ ಆತ ಮೊರೆಯಿಟ್ಟ.

ಕಾಗೆಗಳೇ ನನ್ನನ್ನು 'ನೊಣ'ವಾಗಿಸಿ.

ಕಾಡುಪ್ರಾಣಿಗಳಲ್ಲೂ ಪಕ್ಷಿಗಳಲ್ಲೂ ಸರ್ಪಗಳಲ್ಲೂ ಆತ ತನ್ನ ಇಚ್ಛೆ ಪೂರೈಸಲು ಮನವಿ ಮಾಡಿಕೊಂಡ.

ನನ್ನನ್ನು 'ನೊಣ'ವಾಗಿಸಿ.

ಮರಗಳು ಗಿಡಗಳು ಕೂಗಿ ಹೇಳಿಕೊಂಡವು:

ದೇವರೇ ಪುರುಷೋತ್ತಮನನ್ನು 'ನೊಣ'ವಾಗಿಸಿ.

ಕಾಗೆಗಳು ಕಾ...ಕಾ... ಎಂದು ಕೂಗುತ್ತಾ ತಮ್ಮ ಪ್ರಾರ್ಥನೆಯೊಂದಿಗೆ ಆಕಾಶದಲ್ಲಿ ಹಾರಾಡತೊಡಗಿದವು:

ಪರಮಕಾರುಣ್ಯನಾದ ದೇವರೇ ಪುರುಷೋತ್ತಮನ ಆಸೆಯನ್ನು ನೆರವೇರಿಸಿ ಕೊಡು.

ಕಾಡುಪ್ರಾಣಿಗಳು ದೇವರಲ್ಲಿ ಪರಿಪರಿಯಾಗಿ ಬೇಡಿಕೊಂಡವು: